ತಾಂಡಾಗಳಲ್ಲಿ 241 ತಾಂಡಾಗಳನ್ನು 'ಕಂದಾಯ ಗ್ರಾಮ'ಗಳನ್ನಾಗಿ ಪರಿವರ್ತನೆ ಮಾಡಿದ್ದೀರಿ. ಸುಮಾರು 652 ಗ್ರಾಮಗಳು 'ಕಂದಾಯ ರಹಿತ' ಗ್ರಾಮಗಳಾಗಿ ಏಕೆ ಉಳಿದಿದೆ, ಇಷ್ಟನ್ನು ಮಾಡಿದ್ದೀರಿ ಮತ್ತೆ ಉಳಿದಿದ್ದನ್ನು ಏಕೆ ಮಡುವುದಕ್ಕೆ ಆಗಿಲ್ಲ ಎನ್ನುವ ಪ್ರಶ್ನೆ ಬಂತು. ತುಂಬಾ ಚೆನ್ನಾಗಿ ನಾನು ಕಾನೂನು ಸಚಿವರ ಜೊತೆ ಸಮಾಲೋಚನೆ ಮಾಡಿದ್ದೇನೆ. ತಾವು ಮುಖ್ಯವಾಗಿ ಏನು ಹೇಳಿದಿರಿ, Revenue Act ಗೆ amendment ಮಾಡುವ ವಿಷಯ ನಮ್ಮ ಮುಂದೆ ಇದೆ. ಅದನ್ನು ಚರ್ಚೆ ಮಾಡಿದ್ದೇವೆ. ತಾವು ಹೇಳಿದ್ದು ಸರಿಯಿದೆ. ಏಕೆಂದರೆ ತಾಂಡಾಗಳು ಇರಲಿ, ಹಟ್ಟಿಗಳು ಇರಲಿ, ಎಲ್ಲಿ ಸರ್ಕಾರಿ ಭೂಮಿಗಳಲ್ಲಿ ತಾಂಡಾಗಳು ಇತ್ತು. ಎಲ್ಲಿ ಹಟ್ಟಿಗಳು ಇತ್ತು, ಅವೆಲ್ಲವನ್ನೂ ಕೂಡ ಕಂದಾಯ ಗ್ರಾಮಗಳನ್ನಾಗಿ ಮಾಡಿದ್ದೇವೆ. ಖಾಸಗಿಯವರ ಸ್ವತ್ತಾಗಿರತಕ್ಕಂತಹ ಯಾವ ತಾಂಡಾಗಳು, ಹಟ್ಟಿಗಳು ಇವೆ, ಅವುಗಳನ್ನು ಮಾಡುವುದಕ್ಕೆ ತೊಂದರೆ ಇದೆ ಹಾಗೂ ಕಾನೂನಿನಲ್ಲಿ ಸಮಸ್ಯೆಗಳು ಇವೆ ಎಂಬುದರ ಬಗ್ಗೆ ಅರ್ಥ ಮಾಡಿದ್ದೇವೆ. ಹಾಗಾಗಿ ಮೂಲ ಸಮಸ್ಯೆಗಳನ್ನು ಅರ್ಥ ಮಾಡಿಕೊಂಡು, ಅದನ್ನು ಸರಿಪಡಿಸಿಕೊಂಡು ನಂತರ ತಾವು ಹೇಳಿದ ಹಾಗೆ ಬಹಳ ಮುಖ್ಯವಾಗಿ ಅದಾದರೆ, ಇವೆಲ್ಲವೂ ಸರಿಹೋಗುತ್ತದೆ. ಒಂದು Revenue Act ಗೆ amendment ತರುವುದು ಹೇಗೆ ಎನ್ನುವುದನ್ನು ನಾವು ಈಗಾಗಲೇ ಕಾನೂನು ಸಚಿವರ ಜೊತೆಯಲ್ಲಿ ಸಮಾಲೋಚನೆಯನ್ನು ಮಾಡಿದ್ದೇವೆ. ಅವರ ಮನಸ್ಸಿನಲ್ಲಿರತಕ್ಕಂತಹ ಆತಂಕ ನಮಗೆ ಎಲ್ಲರಿಗೂ ಕೂಡ ಅರ್ಥವಾಗಿದೆ. ಈ ಬಗ್ಗೆ ಸದ್ಯದಲ್ಲಿಯೇ ಸಮಾಲೋಚನೆ ಮಾಡಿ, ಸದನದಲ್ಲಿ ಚರ್ಚೆ ಮಾಡಿ ಆ ಎಲ್ಲಾ ತಾಂಡಾಗಳು ಮತ್ತು ಹಟ್ಟಿಗಳು ಏನೇನು ಇದೆ ಆ ಕಂದಾಯರಹಿತ ಗ್ರಾಮಗಳನ್ನು ನಾವು ಖಂಡಿತವಾಗಿ ಕಂದಾಯ ಗ್ರಾಮಗಳನ್ನಾಗಿ ಮಾಡಿಕೊಡುತ್ತೇವೆ. ಅದಕ್ಕಾಗಿ Revenue Actಗೆ ತಿದ್ದುಪಡಿಯನ್ನು ತರುತ್ತೇವೆಂದು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ.

ಅಧ್ಯಕ್ಷರು : O.K. ಬೋಪಯ್ಯನವರೆ, ತಾವು ಮಾತನಾಡಿ.

3. ವಿಷಯ : ರಾಜ್ಯ ಸರ್ಕಾರದಿಂದ ಮಂಜೂರಾಗಿದ್ದ ಮೊರಾರ್ಜಿ ಶಾಲೆ,

ಕಿತ್ತೂರು ರಾಣಿ ಚೆನ್ನಮ್ಮ ಮತ್ತು ವಾಜಪೇಯಿವಸತಿ ನಿಲಯ ಶಾಲೆಗಳನ್ನು ಮುಚ್ಚಲು ಆದೇಶವಾಗಿರುವುದರಿಂದ ಪರಿಶಿಷ್ಟ ಜಾತಿ,

ಪರಿಶಿಷ್ಟ ಪಂಗಡ ಮತ್ತು ಹಿಂದುಳಿದ ವರ್ಗದವರಿಗೆ ತೊಂದರೆ ಉಂಟಾಗಿರುವ ಬಗ್ಗೆ

ಶ್ರೀ ಕೆ.ಜಿ.ಜೋಪಯ್ಯ (ವಿರಾಜಪೇಟೆ) : ಸನ್ಮಾನ್ಯ ಅಧ್ಯಕ್ಷರೆ, ಸರ್ಕಾರ ದಿನಾಂಕ:21.11.2012ರಲ್ಲಿ ಒಂದು ಆದೇಶವನ್ನು ಮಾಡಿ ಒಟ್ಟು ರಾಜ್ಯದಲ್ಲಿ 12 ವಸತಿ ಶಾಲೆಗಳಲ್ಲಿ, ಕಿತ್ತೂರು ರಾಣಿ ಚೆನ್ನಮ್ಮ ಬಾಲಕಿಯರ ವಸತಿ ಶಾಲೆಗಳು, 15 ಮೊರಾರ್ಜಿ ದೇಸಾಯಿ ವಸತಿ ಶಾಲೆ, 8 ಅಟಲ್ ಬಿಹಾರಿ ವಾಜಪೇಯಿ ವಸತಿ ಶಾಲೆಗಳನ್ನು 2013–14 ನೇ ವರ್ಷದಿಂದ ಪ್ರಾರಂಭಿಸಲು ಅನುಮತಿ ನೀಡಿದೆ. ಇದಕ್ಕೆ cabinet approval ಆಗಿ ದಿನಾಂಕ:23.09.2012ರಂದು Finance Department ನ Note ಆಗಿದೆ. ಇದರ ಪ್ರಕಾರ ನಮ್ಮ ಜಿಲ್ಲೆಯ ಭಾಗಮಂಡಲ ಎನ್ನುವ ಹಿಂದುಳಿದ ಪ್ರದೇಶದಲ್ಲಿ ಒಂದು ಅಟಲ್ ಬಿಹಾರಿ ವಾಜಪೇಯಿ ವಸತಿ ಶಾಲೆ ಇದೆ. ನಾನು ಒಟ್ಟು ಇಡೀ ರಾಜ್ಯದ ಬಗ್ಗೆ ಹೇಳಿದ್ದೇನೆ. ನಮ್ಮ ಜಿಲ್ಲೆಯಲ್ಲಿ ಭಾಗಮಂಡಲ ಪ್ರದೇಶದಲ್ಲಿ ಒಂದು ವಸತಿ ಶಾಲೆ ಆಯಿತು. ಅದಕ್ಕೆ ಪೂರಕವಾಗಿ ನಾವು ಬೇಡಿಕೆಯನ್ನು ಸಲ್ಲಿಸುವುದಕ್ಕಿಂತ ಮುಂಚೆಯೇ 10 ಎಕರೆ ಜಾಗ ಬೇಕೆಂದು ಹೇಳಿದ್ದೆವು. ಜಿಲ್ಲಾಧಿಕಾರಿಯವರು ದಿನಾಂಕ : 8.3.2012 ಆರು ತಿಂಗಳಿಗಿಂತ ಮೊದಲೇ 10 ಎಕರೆ ಜಾಗವನ್ನು reserve ಮಾಡಿ Section 71 of Karnataka Land Revenue Act ಪ್ರಕಾರ ಜಾಗ reserve ಮಾಡಿ ಅಲ್ಲಿಯ ಬಿಸಿಎಂ ಡಿ.ಸಿ. ಯಾರು ಇದ್ದಾರೆ, ಅವರ ಹೆಸರಿಗೆ ಮಾಡಿ ಎಲ್ಲಾ proposal ಅನ್ನು ಮಾಡಿ ಕಳುಹಿಸಿ ಕೊಟ್ಟಿದ್ದಾರೆ. ಅದಾದ ನಂತರ ಈಗ ಸದ್ಯಕ್ಕೆ ಪ್ರಾರಂಭ ಮಾಡುವುದಕ್ಕೆ ಅಲ್ಲಿ ಏನು ಮಾಡಬೇಕು, ನಮ್ಮ ಜಿಲ್ಲೆಯಲ್ಲಿಹಿಂದೆ ಏನು 6 ವಸತಿ ಶಾಲೆಗಳು ಇವೆ. ಆ ಎಲ್ಲಾ ವಸತಿ ಶಾಲೆಗಳು ಸ್ವಂತ ಕಟ್ಟಡದಲ್ಲಿಯೇ ನಡೆಯುತ್ತಿದೆ. ಎಲ್ಲೂ ಕೂಡ ಬಾಡಿಗೆ ಕಟ್ಟಡದಲ್ಲಿ ನಡೆಯುತ್ತಿಲ್ಲ, ಇದಕ್ಕೂ ಕೂಡ ತಾತ್ಕಾಲಿಕವಾಗಿ ಭಾಗಮಂಡಲದಲ್ಲಿ Bee Keeping Training Centre ಇತ್ತು ಅದು close ಆಗಿ ಬಹಳ ವರ್ಷಗಳು ಆಗಿವೆ. ಅಲ್ಲಿ ಸುಮಾರು 200 ಜನರಿಗೆ ಆಗುವಂತಹ ಕಟ್ಟಡವು ಹಾಗೆಯೇ ಇದೆ. ಅಲ್ಲಿ ಎಲ್ಲಾ ವ್ಯವಸ್ಥೆಗಳು ಇದೆ. ತಾತ್ಕಾಲಿಕವಾಗಿ ವಸತಿ ಶಾಲೆ ಮಾಡುವುದಕ್ಕೆ ಅನುಮತಿಯನ್ನು ಕೊಡಬೇಕೆಂದು ಕೇಳಿಕೊಳ್ಳುತ್ತಿದ್ದೇನೆ. ಆ ಕಟ್ಟಡ ಇರುವ ಜಾಗಕ್ಕೆ F.D. Clearance ಆದ

ಮೇಲೆ ಅಲ್ಲಿ ಹಣ ಕೊಟ್ಟರೆ ಮತ್ತೆ ಎಲ್ಲಾ proposal ಗಳು ಇಲಾಖೆಗೆ ಕಳುಹಿಸಿಕೊಟ್ಟಿದ್ದೇವೆ. ಆದರೂ ಸಹ ಅದನ್ನು ಪರಿಗಣನೆ ಮಾಡದೆ ಇರುವುದರಿಂದ ಅಲ್ಲಿ ಕಟ್ಟಡವು ಆಗಿಲ್ಲ, ಮೇ 31ರಲ್ಲಿ ಒಂದು Order ಮಾಡಿದ್ದಾರೆ. ಎಲ್ಲಾ individual case ತೆಗೆದುಕೊಂಡು verify ಮಾಡಿ, ಎಲ್ಲಿ ಬಾಡಿಗೆಗೆ ಇದ್ದಾರೆ, ಎಲ್ಲಿ ಅವ್ಯವಸ್ಥೆಗಳು ಇದೆ ಅದನ್ನು ಸರಿಮಾಡುವಂತಹ ಕೆಲಸ ಮಾಡಬೇಕು. ಅವರ requirement ಪ್ರಕಾರ ಎಲ್ಲವನ್ನೂ ಪೂರೈಸಿದ ಮೇಲೆ ಕೊಡುವುದಕ್ಕೆ ಏನು ತೊಂದರೆ ಇದೆ? ಇದು ಬಹುಶ: ಸರಿಯಾದ ಕ್ರಮವಲ್ಲವೆಂದು ನಾನು ಮಾನ್ಯ ಸಚಿವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ನಿಮ್ಮ ಎಲ್ಲಾ requirement ಏನಿದೆ, ಅದೆಲ್ಲವನ್ನೂ ಪೂರೈಸಿದ್ದೇವೆ. ತಕ್ಷಣವೇ ಈ ವರ್ಷ ಈ ಆದೇಶವಾದ ಮೇಲೆ ಮಕ್ಕಳೂ ಸಹ select ಆಗಿದ್ದಾರೆ. ಆ ಮಕ್ಕಳು ಈಗ ಎಲ್ಲಿಗೆ ಹೋಗಬೇಕು? ಅವರನ್ನು ಬೇರೆ ಜಿಲ್ಲೆಗೆ ಕಳುಹಿಸಿ ಎಂದರೆ ಕಳುಹಿಸುವುದಕ್ಕೆ ಯಾರು ತಯಾರಿದ್ದರೆ ಅಥವಾ ಆ ಭಾಗಮಂಡಲ ಪ್ರದೇಶದಲ್ಲಿರುವಂತಹ ಮಕ್ಕಳು ಏನು ಮಾಡಬೇಕು?

ಅಧ್ಯಕ್ಷರು : ಆಯಿತು. ತಾವು ಹೇಳಿದ್ದೀರಿ. ಈ ವರ್ಷವೇ ಪ್ರಾರಂಭ ಮಾಡಿಸೋಣ.

ಶ್ರೀ ಕೆ.ಜಿ.ಬೋಪಯ್ಯ : ಅಲ್ಲಿ ಏನೂ ವಿಚಾರಣೆಯನ್ನು ಮಾಡದೆಯೇ ಆದೇಶವನ್ನು ಮಾಡಿದರೆ ಹೇಗೆ ಆಗುತ್ತದೆ? ತಾವು ಅದಕ್ಕೆ ಈ ವಷವೇ ಅನುಮತಿಯನ್ನು ಕೊಡಬೇಕು. ನಿಮ್ಮ ಎಲ್ಲಾ requirement ಅನ್ನು ನಾವು ಪೂರೈಕೆ ಮಾಡಿದ್ದೇವೆ. ನಮಗೆ ಅಲ್ಲಿ ಶಾಲೆ ಪ್ರಾರಂಭ ಮಾಡುವುದಕ್ಕೆ ಅವಕಾಶವನ್ನು ಕೊಡುಬೇಕು. ಅದಕ್ಕಾಗಿ ತಾವು ಹಣ ಬಿಡುಗಡೆ ಮಾಡಬೇಕು. ಹಣ ಬಿಡುಗಡೆ ಮಾಡಿದರೆ building ಕೆಲಸ ಕೂಡ ಆಗುತ್ತದೆ. ಈ ಬಗ್ಗೆ ನಾನು ತಮ್ಮ ಮುಖಾಂತರ ಅವರಲ್ಲಿ ವಿನಂತಿಯನ್ನು ಮಾಡುತ್ತಿದ್ದೇನೆ.

ಅಧ್ಯಕ್ಷರು : O.K. ಮಾನ್ಯ ಗೋವಿಂದ ಎಂ. ಕಾರಜೋಳರವರೆ, ತಾವು ಮಾತನಾಡಿ.

ಶ್ರೀ ಗೋವಿಂದ ಎಂ. ಕಾರಜೋಳ (ಮುಧೋಳ) : ಸನ್ಮಾನ್ಯ ಅಧ್ಯಕ್ಷರೆ, ನಾವು ಯಾವುದೇ ಹೊಸ ಸ್ಕೂಲ್ ಮತ್ತು ಕಾಲೇಜುಗಳನ್ನು ಪ್ರಾರಂಭ ಮಾಡುವಂತಹ ಪೂರ್ವದಲ್ಲಿ ಮೂಲಭೂತ ಸೌಕರ್ಯಗಳು ಕಟ್ಟಡಗಳನ್ನು

ಕಟ್ಟಿರುವುದಿಲ್ಲ. ಅಲ್ಲಿ ಸ್ಥಳೀಯವಾಗಿ ಸಿಗುವಂತಹ ಮೂಲಭೂತ ಸೌಕರ್ಯಗಳನ್ನು ಕಟ್ಟಡಗಳಿಗೆ ಉಪಯೋಗ ಮಾಡಿಕೊಂಡು ಶಾಲಾ ಕಾಲೇಜುಗಳನ್ನು ಪ್ರಾರಂಭ ಮಾಡುತ್ತೇವೆ. ಅದೇ ರೀತಿಯಾಗಿ ಇವತ್ತು ಅಟಲ್ ಬಿಹಾರಿ ವಾಜಪೇಯಿ ವಸತಿ ಶಾಲೆ, ಮೋರಾರ್ಜಿ ದೇಸಾಯಿ ಶಾಲೆ, ಕಿತ್ತೂರು ರಾಣಿ ಚಿನ್ನಮ್ಮ ಶಾಲೆ, ಪ್ರಾರಂಭ ಮಾಡುವುದಕ್ಕೆ ನಾವು ಸ್ಥಳೀಯವಾಗಿ ವ್ಯವಸ್ಥೆಯನ್ನು ಮಾಡಿಕೊಂಡಿದ್ದೇವೆ. ನಮ್ಮ ಜಿಲ್ಲಾಧಿಕಾರಿಗಳು ಸಹ ವರದಿಯನ್ನು ಕಳುಹಿಸಿಕೊಟ್ಟಿದ್ದಾರೆ. ಈಗಾಗಲೇ ಮಕ್ಕಳಿಗೆ ಸಿ.ಇ.ಟಿ. ಮಾಡಿ ಮೆರಿಟ್ ಲಿಸ್ಟ್‌ನ್ನು publish ಮಾಡಿದ್ದಾರೆ. ಆ ಮಕ್ಕಳು ಶಾಲೆಗೆ ಸೇರುವುದಕ್ಕಾಗಿ ಇವತ್ತು ಕಾಯುತ್ತಿದ್ದಾರೆ. ಅದಕ್ಕಾಗಿ ನಾನು ಸರ್ಕಾರಕ್ಕೆ ಒತ್ತಾಯ ಮಾಡುತ್ತೇನೆ. ಅದಕ್ಕಾಗಿ ಕೂಡಲೇ ನನ್ನ ಮತಕ್ಷೇತ್ರದಲ್ಲಿರುವ ಹಲಗಲಿ ಗ್ರಾಮದಲ್ಲಿ ಪ್ರಾರಂಭ ಮಾಡುವುದಕ್ಕೆ ಅನುಮತಿಯನ್ನು ಕೊಡಬೇಕು. ಈ ಬಗ್ಗೆ ಮಾನ್ಯ ಸಚಿವರಿಗೆ ಎಲ್ಲಾ ವರದಿಯನ್ನು ನಾನು ಕಳುಹಿಸಿಕೊಡುತ್ತೇನೆ.

ಅಧ್ಯಕ್ಷರು : ಮಾನ್ಯ ಸಚಿವರೆ, ತಾವು ಉತ್ತರವನ್ನು ಕೊಡಿ.

ಶ್ರೀ ಹೆಚ್.ಆಂಜನೇಯ (ಸಮಾಜ ಕಲ್ಯಾಣ ಸಚಿವರು) : ಸರ್ಕಾರ 74 ಶಾಲೆಗಳನ್ನು ಮಂಜೂರು ಮಾಡಿದ್ದಾರೆ. ಇದನ್ನು ಮಂಜೂರು ಮಾಡಿದಂತಹ ಸಂದರ್ಭದಲ್ಲಿ ಅದಕ್ಕೆ ಬೇಕಾಗಿರುವಂತಹ ಮೂಲಭೂತ ಸೌಕರ್ಯ ಎಂದರೆ ಅಲ್ಲಿ 50 ಮಕ್ಕಳು ಇರುವ ಕಡೆಗಳಲ್ಲಿ ಒಂದು ವ್ಯವಸ್ಥಿತವಾದಂತಹ ಕಟ್ಟಡವು ಜಿಲ್ಲೆಯಲ್ಲಿ ಬಾಡಿಗೆಗೆ ಎಲ್ಲೂ ಕೂಡ ಸಿಗುವುದಿಲ್ಲ. ಒಂದು ವೇಳೆ ಬಾಡಿಗೆಗೆ ಸಿಕ್ಕಿದರೂ ಕೂಡ ಅಲ್ಲಿ ಬೇಕಾಗಿರುವಂತಹ ಸ್ನಾನದ ಮನೆ ಇರಬೇಕು, toilet ಇರಬೇಕು, ಸಿಬ್ಬಂದಿಗಳು ಉಳಿದುಕೊಳ್ಳುವುದಕ್ಕೆ ವಸತಿ ಗೃಹ ಇರಬೇಕು. ಆಟದ ಮೈದಾನ ಇರಬೇಕು, ಗೋದಾಮುಗಳ ಕೊಠಡಿಗಳು ಇರಬೇಕು. ಈ ಎಲ್ಲಾ ಮೂಲಭೂತ ಸೌಕರ್ಯ ಇರುವಂತಹ ಕಟ್ಟಡಗಳು ಸಿಗುವುದಿಲ್ಲ. ಈಗಾಗಲೇ ಕಳೆದ 8 ವರ್ಷಗಳಿಂದ ನನ್ನ ಕ್ಷೇತ್ರದ ಬಗ್ಗೆ ಒಂದು ಉದಾಹರಣೆಯನ್ನು ಹೇಳುತ್ತೇನೆ. ಒಂದು ಮೊರಾರ್ಜಿ ದೇಸಾಯಿ ವಸತಿ ಶಾಲೆ ಕಳೆದ 8 ವರ್ಷಗಳಿಂದ ದನಗಳೂ ಕೂಡ ವಾಸ ಮಾಡುವುದಕ್ಕೆ ಯೋಗ್ಯವಾಗದೇ ಇರುವಂತಹ ಒಂದು ಸ್ಥಳದಲ್ಲಿ ನಡೆಯುತ್ತಿದೆ. ಈಗ ನಾವು ಏನು ಮಾಡುತ್ತಿದ್ದೇವೆಂದರೆ, ಯಾವುದೇ ಮಕ್ಕಳನ್ನು ನಾವು ಬೀದಿಗೆ ಹಾಕಿಲ್ಲ. ಆ ಪೋಷಕರು ಏನೂ ಆತಂಕ ಪಡಬೇಕಾಗಿಲ್ಲ. ಈ ಬಗ್ಗೆ ಮಕ್ಕಳೂ ಕೂಡ

ಆತಂಕಕ್ಕೆ ಒಳಗಾಗಬೇಕಾಗಿಲ್ಲ. ಎಲ್ಲೆಲ್ಲಿ counselling ನಡೆದಿದೆ, ಎಲ್ಲೆಲ್ಲಿ ಶಾಲೆಗಳೂ ಮಂಜೂರಾಗಿದೆ. ಆ ಶಾಲಾ ಮಕ್ಕಳಿಗೆ ಪರ್ಯಾಯ ವ್ಯವಸ್ಥೆಯನ್ನು ನಾವು ಮಾಡಿದ್ದೇವೆ. ಮೋರಾರ್ಜಿ ದೇಸಾಯಿ ವಸತಿ ಶಾಲೆ, ಕಿತ್ತೂರು ರಾಣಿ ಚೆನ್ನಮ್ಮ ಶಾಲೆ, ಅಟಲ್ ಬಿಹಾರಿ ವಾಜಪೇಯಿ ವಸತಿ ಶಾಲೆಗಳಲ್ಲಿ ಅವರಿಗೆ ಪ್ರವೇಶಾವಕಾಶವನ್ನು ಕೊಟ್ಟು ಅವರಿಗೆ ಎಲ್ಲಾ ರೀತಿಯ ಸೌಕರ್ಯಗಳನ್ನು ಕೊಡುವ ಬಗ್ಗೆ ನಾನು ಈಗಾಗಲೇ ಆದೇಶವನ್ನು ನೀಡಿದ್ದೇನೆ. ಎಲ್ಲಿಯಾದರೂ ಅಕಸ್ಮಾತ್ ಉತ್ತಮವಾದಂತಹ ಕಟ್ಟಡಗಳು ಸಿಕ್ಕಿದರೆ, ಸರ್ಕಾರದ ಕಟ್ಟಡವು ಸಿಕ್ಕಿದರೆ ಅದು 50 ಜನರು ವಾಸ ಮಾಡುವುದಕ್ಕೆ ಯೋಗ್ಯವಾಗಿರಬೇಕು. ಅಲ್ಲಿ ನೀರಿನ ವ್ಯವಸ್ಥೆ ಇರಬೇಕು. ಸಿಬ್ಬಂದಿಗಳು ಉಳಿದುಕೊಳ್ಳಲಿಕ್ಕೆ ವ್ಯವಸ್ಥೆ ಇರಬೇಕು. ಎಲ್ಲಾ ಮೂಲಭೂತ ಸೌಕರ್ಯ ಇರುವಂತಹ ಕಟ್ಟಡ ನಮಗೆ ಸಿಗುವುದಾದರೆ ಯಾವು ಅಲ್ಲಿಯೂ ಕೂಡ ಮಾಡುವುದಕ್ಕೆ ತಯಾರಿದ್ದೇವೆ. ಆದರೆ ಇಲ್ಲಿ ಏನಾಗಿದೆ ಎಂದರೆ ನೀವು ನಂಬುತ್ತೀರೋ ಇಲ್ಲವೋ ಗೊತ್ತಿಲ್ಲ. 300 ಶಾಲೆಗಳು ಇವತ್ತು ಬಾಡಿಗೆ ಕಟ್ಟಡದಲ್ಲಿ ನಡೆಯುತ್ತಿದೆ. ಇದಕ್ಕಾಗಿ ನಾವು ವರ್ಷಕ್ಕೆ 10 ಕೋಟಿ ರೂಪಾಯಿಗಳನ್ನು ಭರಿಸುತ್ತಿದ್ದೇವೆ, ನಮ್ಮ ಹತ್ತಿರ ಬೇಕಾದಷ್ಟು ಹಣ ಇದೆ. ಇಲ್ಲಿ ಇಚ್ಛಾಶಕ್ತಿಯ ಕೊರತೆ ಇದೆ. ನಿವೇಶನವೂ ಕೂಡ ಇದೆ. ಯಾರೂ ಜನಪ್ರತಿನಿಧಿಗಳು ಇದ್ದಾರೆ ನೀವುಗಳು ಮತ್ತು ನಾವು ಈಗಾಗಲೇ ಜಿಲ್ಲಾಧಿಕಾರಿಗಳಿಗೆ ನಮ್ಮ ಮಾನ್ಯ ಮುಖ್ಯಮಂತ್ರಿಗಳು ಈ ಬಗ್ಗೆ ಒಂದು ಆಜ್ಞೆಯನ್ನು ಮಾಡಿದ್ದಾರೆ. ಎಲ್ಲೆಲ್ಲಿ ಸರ್ಕಾರಿ ಜಾಗಗಳು ಇವೆ ಕೂಡಲೇ ನೀವು residential ಶಾಲೆಗೆ 10–10 ಎಕರೆ ಜಮೀನನ್ನು ಮಂಜೂರು ಮಾಡಿ ಎಂದು ಹೇಳಿದ್ದಾರೆ. ಅದರಿಂದಾಗಿ ನಾವು ಮಂಜೂರು ಮಾಡಿದ್ದೇವೆಂದರೆ ಒಂದು ವರ್ಷದೊಳಗಾಗಿ ಅಲ್ಲಿ ಕಟ್ಟಡಗಳನ್ನು ಕಟ್ಟಿ ಈ ಮಕ್ಕಳನ್ನು ಅಲ್ಲಿಗೆ ಸೇರಿಸುತ್ತೇವೆ.

ಅಧ್ಯಕ್ಷರು : O.K.

ಶ್ರೀ ಹೆಚ್.ಆಂಜನೇಯ : ಯಾವುದೇ ರೀತಿಯ ಸವಲತ್ತು ಇಲ್ಲದಂತಹ ಸ್ಥಳಗಳಲ್ಲಿ ನಮ್ಮ ಮಕ್ಕಳುಗಳು ಓದುವುದು ಬೇಡ. ಕಳೆದ 6 ವರ್ಷದಿಂದ ಅಲ್ಲಿ ಓದುತ್ತಿದ್ದಾರೆ. ಅವರು ಎಲ್ಲಾ ರೀತಿಉ ಮೂಲಭೂತ ಸೌಕರ್ಯದಿಂದ ವಂಚಿತರಾಗಿದ್ದಾರೆ. ಅಲ್ಲಿ ಅವರಿಗೆ ಆಟದ ಮೈದಾನ ಇಲ್ಲ. ಸರಿಯಾದ

ರಕ್ಷಣೆಯೂ ಇಲ್ಲ. ಈ ರೀತಿಯಿರುವಂತಹ ಕಟ್ಟಡದಲ್ಲಿ ನಾವು ಶಾಲೆಗಳನ್ನು ನಡೆಸುವುದಕ್ಕಾಗುವುದಿಲ್ಲ.

(ಗೊಂದಲ)

ಅಧ್ಯಕ್ಷರು : ಮಾನ್ಯ ಸಚಿವರು ಆದೇಶವನ್ನು ಕೊಟ್ಟಿದ್ದಾರೆ.

ಶ್ರೀ ಗೋವಿಂದ ಎಂ. ಕಾರಜೋಳ : ಅಲ್ಲಿ ಶಾಲೆಗಳನ್ನು ಆರಂಭ ಮಾಡಬೇಕು. ಈ ರೀತಿ ಮಾಡುವುದು ಸರಿಯಲ್ಲ. ನಿಮಗೆ ಆದೇಶ ಮಾಡುವುದಕ್ಕೆ ಏನು ತೊಂದರೆ ಇದೆ?

(ಗೊಂದಲ)

ಅಧ್ಯಕ್ಷರು : ಇದು ಚರ್ಚೆಯಲ್ಲ. ಅವರು ಕೊಟ್ಟಿರುವಂತಹ reply ಬಹಳ clear ಆಗಿ ಕೊಟ್ಟಿದ್ದಾರೆ.

ಶ್ರೀ ಕೆ.ಜಿ.ಬೋಪಯ್ಯ : ಅಲ್ಲಿ ಜಾಗ ಇದೆಯಲ್ಲಾ?

(ಗೊಂದಲ)

ಅಧ್ಯಕ್ಷರು : ಮಾನ್ಯ ಸಚಿವರು ಹೇಳಿದ್ದಾರೆ, ಇನ್ನೇನು ಹೇಳಬೇಕು?

(ಗೊಂದಲ)

ಅಧ್ಯಕ್ಷರು : ಮಾನ್ಯ ಸಚಿವರು ಶಾಲೆಗಳನ್ನು ಮುಚ್ಚುವುದಿಲ್ಲವೆಂದು ಹೇಳಿದ್ದಾರಲ್ಲಾ.?

ಶ್ರೀ ಹೆಚ್. ಆಂಜನೇಯ : ಯಾವುದೇ ಸವಲತ್ತು ಇಲ್ಲದಿರುವ ಕಡೆಗಳಲ್ಲಿ ಶಾಲೆಗಳನ್ನು ಮಾಡುವುದಿಲ್ಲ.

(ಗೊಂದಲ)

ಅಧ್ಯಕ್ಷರು : ಮಾನ್ಯ ಸಚಿವರೆ, ತಾವು ಹೇಳಿ.

ಶ್ರೀ ಹೆಚ್. ಆಂಜನೇಯ : ಮಾಜಿ ಮುಖ್ಯಮಂತ್ರಿಗಳಾದ ಜಗದೀಶ್ ಶೆಟ್ಟರ್‌ರವರ ಗಮನಕ್ಕೆ ತರುತ್ತಿದ್ದೇನೆ. ನಾವು ಇದರಲ್ಲಿ ರಾಜಕೀಯ ಮಾಡುವುದಿಲ್ಲ. ಇಲ್ಲಿ ಮಾನ್ಯ ಮುಖ್ಯಮಂತ್ರಿಗಳು ಬಹಳ ಕ್ಲಿಯರ್ ಆಗಿ ರಾಗದ್ವೇಷ ಮತ್ತು ಸೇಡಿಲ್ಲದೆ ಅಭಿವೃದ್ಧಿ ಕಡೆಗೆ ನಿಮ್ಮ ಗಮನ ಇರಬೇಕೆಂದು ಒಂದು ಕಿವಿ ಮಾತನ್ನು ಹೇಳಿದ್ದಾರೆ. ನೀವು ಮಾಡಿರುವುದನ್ನು ನಾವು ತೆಗೆದು ಹಾಕಬೇಕೆಂಬುದು ನಮ್ಮ ಉದ್ದೇಶವಲ್ಲ. ನೀವು ಯಾವ ಉದ್ದೇಶಕ್ಕಾಗಿ ಶಾಲೆಯನ್ನು ಕೊಟ್ಟಿದ್ದೀರಿ, ಅದರ concept ಏನು ಇದೆ ಅದು ಈಡೇರಬೇಕು. ಆ ಮಕ್ಕಳಿಗೆ ಸಿಗಬೇಕಾದಂತಹ ಎಲ್ಲಾ ಸವಲತ್ತುಗಳು ದೊರೆಯಬೇಕು.

(ಗೊಂದಲ)

ಅಧ್ಯಕ್ಷರು : ಮಾನ್ಯ ಸಚಿವರು total ಆಗಿ ಎಲ್ಲವನ್ನೂ ಹೇಳಿದ್ದಾರೆ. ಇನ್ನೇನು ಹೇಳುವುದಕ್ಕಾಗುತ್ತದೆ?

(ಗೊಂದಲ)

ಶ್ರೀ ಗೋವಿಂದ ಎಂ. ಕಾರಜೋಳ : ಅಲ್ಲಿ ಕಟ್ಟಡಗಳು ಮತ್ತು ಮೂಲಭೂತ ಸೌಕರ್ಯಗಳು ಎಲ್ಲವೂ ಇದೆ.

(ಗೊಂದಲ)

ಅಧ್ಯಕ್ಷರು : ನೀವಿಬ್ಬರು ಒಟ್ಟೊಟ್ಟಿಗೆ ಮಾತನಾಡಿದರೆ ಹೇಗೆ? ಮಾನ್ಯ ಜಗದೀಶ್ ಶೆಟ್ಟರ್‌ರವರೆ, ಮಾನ್ಯ ಸಚಿವರು clear ಆಗಿ ಮಾಡುತ್ತೇವೆಂದು ಹೇಳಿದ್ದಾರೆ.

ಶ್ರೀ ಹೆಚ್. ಆಂಜನೇಯ: ನಾನು ಬಾಡಿಗೆ ಕಟ್ಟಡದಲ್ಲಿ ನಡೆಸುವುದಕ್ಕೆ ಕೊಡುವುದಿಲ್ಲ. ಸರ್ಕಾರಿ ಕಟ್ಟಡದಲ್ಲಿ ಉತ್ತಮವಾದ ವ್ಯವಸ್ಥೆ ಇತ್ತೆಂದರೆ, ನಮ್ಮ ಅಧಿಕಾರಿಗಳಿಂದ ಅಲ್ಲಿ ಪರಶೀಲನೆ ಮಾಡಿಸಿ, ಅದು ಯೋಗ್ಯವಾಗಿದ್ದರೆ ನಾನೇ ಕೊಡಿಸುತ್ತೇನೆ.

(ಗೊಂದಲ)

ಅಧ್ಯಕ್ಷರು : ಸಾಕು ಬಿಡಿ, ಇಷ್ಟು ಚೆನ್ನಾಗಿ ಹೇಳಿದ್ದಾರೆ, ಇನ್ನೆಷ್ಟು ಹೇಳಬೇಕು?

ಶ್ರೀ ಹೆಚ್. ಆಂಜನೇಯ : ಬೋಪಯ್ಯನವರೆ, ನಿಮಗೆ ವ್ಯವಸ್ಥೆ ಮಾಡಿಸಿಕೊಡುತ್ತೇನೆ.

ಅಧ್ಯಕ್ಷರು : ಆಯಿತು.

ಶ್ರೀ ಗೋವಿಂದ ಎಂ. ಕಾರಜೋಳ : ಸಚಿವರೇ, ನಮ್ಮದು ಹೇಳಿ.

ಶ್ರೀ ಹೆಚ್. ಆಂಜನೇಯ : ನಾನು ಹೇಳಿದೆನಲ್ಲಾ, ಸ್ಥಳ ಚೆನ್ನಾಗಿರಬೇಕು.

(ಗೊಂದಲ)

ಅಧ್ಯಕ್ಷರು : ಎಂ.ಟಿ.ಕೃಷ್ಣಪ್ಪ

ಶ್ರೀ ಎಂ.ಟಿ.ಕೃಷ್ಣಪ್ಪ (ತುರುವೇಕೆರೆ) : ನನ್ನ ಕ್ಷೇತ್ರದ ಶಿಂಷಾ ನದಿಯಲ್ಲಿ ಸುಮಾರು ಮರಳು ದಂಧೆ ನಡೆಯುತ್ತಿದೆ.

ಅಧ್ಯಕ್ಷರು : ನಿಮ್ಮ ರುಜು ಇಲ್ಲ, ವ್ಯವಸ್ಥೆ ಮಾಡಿದ್ದೇವೆಂದು ಹೇಳಿದ್ದಾರೆ ಬಿಡಿ. ಯಾವುದೇ ಅನ್ಯಾಯ ಮಾಡುವುದಿಲ್ಲ, ಎಲ್ಲಾ ಸರಿಪಡಿಸಿಕೊಡುತ್ತೇವೆಂದು ಅವರು clear ಆಗಿ ಹೇಳಿದ್ದಾರೆ. ಆಯಿತು. ಪ್ಲೀಸ್.

ಶ್ರೀ ಬಿ.ಸುರೇಶ್‌ಗೌಡ : ಅಧ್ಯಕ್ಷರೆ, ಈಗ ಮಕ್ಕಳನ್ನೆಲ್ಲಾ ಬೀದಿಗೆ ಹಾಕಿ ಹೊರಗಡೆ ಹೋಗಿ ಎಂದು ಹೇಳಿದರೆ ಹೇಗೆ?

ಅಧ್ಯಕ್ಷರು : ಆ ರೀತಿ ಅವರು ಹೇಳಿದ್ದಾರೆಯೇ?

ಶ್ರೀ ಬಿ.ಸುರೇಶ್‌ಗೌಡ : ಈಗ admissions ಆಗಿ ಹೋಗಿದೆ, ಈಗ ಅದನ್ನು ರದ್ದು ಮಾಡಿ ಎಂದರೆ ಹೇಗೆ?

ಅಧ್ಯಕ್ಷರು : ಅವರು ಅಷ್ಟು ಚೆನ್ನಾಗಿ ಹೇಳಿದ್ದಾರೆ, ನೀವು ನೋಟಿಸ್ ಕೊಟ್ಟಿರುವಿರಾ? ಇಲ್ಲ ಸುಮ್ಮನಿರಿ, ಸಾಕು ಬಿಡಿ.

4. ವಿಷಯ : ರಾಜ್ಯದಲ್ಲಿ ಅಕ್ರಮ ಮರುಳು ಗಣಿಗಾರಿಕೆ ನಡೆಯುತ್ತಿರುವುದರಿಂದ ಸರ್ಕಾರದ ಬೊಕ್ಕಸಕ್ಕೆ ನಷ್ಟ ಉಂಟಾಗುತ್ತಿರುವ ವಿಚಾರದಲ್ಲಿ ನೀಡಿರುವ ಸೂಚನೆಯ ಬಗ್ಗೆ.

ಶ್ರೀ ಎಂ.ಟಿ.ಕೃಷ್ಣಪ್ಪ (ತುರುವೇಕೆರೆ) : ನಮ್ಮ ಕ್ಷೇತ್ರ ತುರುವೇಕೆರೆಯ ಶಿಂಷಾ ನದಿಯಲ್ಲಿ ಮರಳು ದಂಧೆ ನಡೆಯುತ್ತಿದೆ, ಅಲ್ಲಿ ಬಹುಶಃ ಯಾರೋ ಒಬ್ಬ ಆಶ್ರಯ ಮನೆ ಕಟ್ಟಿಕೊಳ್ಳುವವನು ಸಣ್ಣ ಸಣ್ಣ ಮನೆಗಳನ್ನು ಕಟ್ಟಿಕೊಳ್ಳುವವನು ಟ್ರಾಕ್ಟರ್‌ನಲ್ಲಿ ತುಂಬಿಕೊಳ್ಳಲಿ, ನಮ್ಮದೇನೂ ವಿರೋಧವಿಲ್ಲ, ಏನಾಗಿದೆ ಅಂದರೆ ಕೆಲವಷ್ಟೇ ಜನ ದಂಧೆ ಮಾಡುತ್ತಿದ್ದಾರೆ. ಇಟಾಚಿ, ಲಾರಿ, ಟ್ರಾಕ್ಟರ್‌ಗಳಲ್ಲಿ ತುಂಬಿ stock ಮಾಡಿ ಅದನ್ನು ಬೆಂಗಳೂರಿಗೆ ದಿವಸ ಕೊನೆ ಪಕ್ಷ 30–40 ಲಾರಿಗಳಲ್ಲಿ ಮರಳು ಲೋಡ್ ಹೋಗುತ್ತಿವೆ. ಮಹದೇಪ್ಪನವರೆ, ಹಿಂದೆ ಆ ನದಿ ಪಾತ್ರದಲ್ಲಿ ಮರಳು ಬೊರ್ ಎಂದು ಹಾಕುತ್ತಿದ್ದರು. 40–50 ಅಡಿಗೆ ಸಾಕಷ್ಟು ನೀರು ಬರುತ್ತಿತ್ತು. ಅಲ್ಲಿ ತೆಂಗು, ಅಡಿಕೆಯನ್ನೆಲ್ಲಾ ಸುಮಾರು ಹತ್ತು, ಇಪ್ಪತ್ತು, ಮೂವತ್ತು ವರ್ಷಗಳಿಂದ ಬೆಳೆದಿವೆ. ಈಗೇನಾಗಿದೆ,ಭೀಕರ ಬರಗಾಲ ಇದೆ, ನೀರಿಲ್ಲ. ಹಾಗಾಗಿ ಮರುಳು ಸಂಪೂರ್ಣವಾಗಿ ಲಿಫ್ಟ್ ಮಾಡಿಬಿಟ್ಟು ಎಲ್ಲಾ ಬೋರ್‌ವೆಲ್ dryಆಗಿವೆ. ಜಾನುವಾರುಗಳಿಗೆ ಕುಡಿಯಲಿಕ್ಕೆ ನೀರಿಲ್ಲ. 700–800 ಅಡಿ ಬೋರ್‌ವೆಲ್ ಕೊರೆದರೂ ನೀರು ಬರುವುದಿಲ್ಲ. ಅಂಥ ತೀವ್ರವಾದ ಸಮಸ್ಯೆಯಾಗಿದೆ. ಅಲ್ಲಿ ಕೆಲವಷ್ಟೆ ಜನ ದಂಧೆ ಮಾಡುತ್ತಾರೆ.

ಅಧ್ಯಕ್ಷರು : ಈಗ ಏನು ಮಾಡಬೇಕು ಹೇಳಿ.